ಕಟ್ಟಿಸುತ್ತಾರೆ? ಎಲ್ಲಿ ಶೂ ಟೈಟ್ ಹಾಕಿಸುತ್ತಾರೆ? ಯಾವ ಶಾಲೆಯಲ್ಲಿ ಹಳದಿ ಬಸ್ಸುಗಳು ಸಾಲಾಗಿ ನಿಂತಿರುತ್ತವೆ– ಈ ಪ್ರಶ್ನೆಗಳೇ ಇಂದು ಶಿಕ್ಷಣದ ಗುಣಮಟ್ಟವನ್ನು ಅಳೆಯುವ ಮಾಪಕಗಳಾಗಿ ಬದಲಾಗಿವೆ. ಶಾಲೆ ಒಂದು ಶಿಸ್ತಿನ ಕಾರ್ಖಾನೆಯಾಗಿ ಕಾಣಿಸಿದರೆ, ಅದೇ ಶಿಸ್ತು ಮಗುವಿನ ಭವಿಷ್ಯದ ಬದುಕಿನ ಭರವಸೆಯೆಂಬ ಭ್ರಮೆ ನಮ್ಮಲ್ಲಿ ಗಟ್ಟಿಯಾಗಿ ಕೂತಿದೆ.

ಇದಕ್ಕೆ ಎದುರುಗಡೆಯೇ ಇರುವ ಆಕಾರರಹಿತ, ರೂಪರಹಿತ ಶಾಲೆಗಳನ್ನು ಗಮನಿಸಿ. ಇಲ್ಲಿಯ ಕಟ್ಟಡಗಳು ಮಾತನಾಡುವುದಿಲ್ಲ. ಅಂಗಳದಲ್ಲಿ ಕಲ್ಲು ಮಣ್ಣು, ಕುಲಗೆಟ್ಟ ಗೋಡೆಗಳ ಮಾಸಿದ ಬಣ್ಣ, ಕಂಬಿ ಬೆಳಕಿದ ಕಿಟಕಿ ಹಂಚು ಚದುರಿದ ಮಾಡು, ಬೀಗ ಇಲ್ಲದ ಬಾಗಿಲು. ಆದರೆ ಒಳಗಡೆ ಮಾತ್ರ ಭಾಗಶಃ ತರಬೇತಿ ಪಡೆದ ಶಿಕ್ಷಕರೇ ಇದ್ದಾರೆ. ಮಾತಾಡುವ ಮನಸ್ಸು, ಕೇಳುವ ಕಿವಿ, ತಪ್ಪು ಮಾಡಿದ ಮಗುವಿನ ಬೆನ್ನ ಮೇಲೆ ಕೈ ಇಡುವ ಸಹನೆ ಇದೆ. ಉದಾಹರಣೆಗೆ, ಈ ದೇಶದ ಸರಕಾರಿ ಶಾಲೆಗಳನ್ನೇ ತೆಗೆದುಕೊಳ್ಳಿ. ಅವು ರೂಪಕೇಂದ್ರಿತವಾಗಿಲ್ಲ. ಆದರೆ ಅವು ಬದುಕಿಗೆ ಬಹಳ ಹತ್ತಿರವಾಗಿವೆ. ಇಲ್ಲಿ ಮಗು ಅಂಗಳದಲ್ಲಿ ಓಡಾಡುತ್ತದೆ, ಮಣ್ಣಲ್ಲಿ ಆಟ ಆಡುತ್ತದೆ, ಬೆವರುತ್ತದೆ, ಮಳೆಗಾಲದಲ್ಲಿ ಮಾಡಿನಡಿಯ ನೀರಲ್ಲಿ ಕಾಗದದ ದೋಣಿ ಬಿಡುತ್ತದೆ. ಆಗಾಗ ಆಯತಪ್ಪಿ ಬೀಳುತ್ತದೆ, ಮತ್ತೆ ಎದ್ದು ನಗುತ್ತದೆ. ಇದು ಪಠ್ಯಕ್ರಮದ ಹೊರಗಿನ ಶಿಕ್ಷಣವಲ್ಲ; ಬದುಕಿನ ಮೂಲ ಪಾಠ.

ಪುಟ್ಟ ಮಗು ಪ್ರಕೃತಿಗೆ ಮೈ ಒಡ್ಡಬೇಕು. ಮಣ್ಣು, ದೂಳು, ಬಿಸಿಲು, ಗಾಳಿ–ಇವೆಲ್ಲವೂ ಶಿಕ್ಷಣದ ಭಾಗಗಳೇ. ಆದರೆ ಆ ಮಗುವನ್ನು ಹವಾ ನಿಯಂತ್ರಿತ ಕೊಠಡಿಗೆ ಹಾಕಿ, ಗಾಜಿನ ಒಳಗಡೆಯೇ ಬೆಳೆಸಿದರೆ, ಅದು ಬದುಕಿಗೆ ಕೆಳಗಡೆಯಿಂದ ಪ್ರವೇಶಿಸಿದಂತೆ ಆಗುವುದಿಲ್ಲ. ಅದು ಮೇಲ್ಗಡೆಯಿಂದ, ನೇರವಾಗಿ ಟೆರೇಸ್‌ಗೆ ಇಳಿದಂತೆ ಆಗುತ್ತದೆ. ನೆಲದ ಸ್ಪರ್ಶವಿಲ್ಲದೆ ಬೆಳೆದ ಬದುಕಲ್ಲಿ ಜಾರಿ ಬಿದ್ದಾಗ ಹಿಡಿಯಲು ಏನೂ ಇರುವುದಿಲ್ಲ. ನಮ್ಮಲ್ಲಿ 40 ವರ್ಷ ದಾಟಿದ ಬಹುಪಾಲು ಜನ ಶಿಕ್ಷಣವನ್ನು ಕೆಳಗಡೆಯಿಂದಲೇ ಪ್ರವೇಶಿಸಿದವರು. ಹಳ್ಳಿಯ ಶಾಲೆ, ನಗರ ಅಂಚಿನ ಕಾಲೇಜು, ಶಿಕ್ಷಕರ ಕೊರತೆ, ಪುಸ್ತಕಗಳ ಅಭಾವ– ಇವೆಲ್ಲದರ ನಡುವೆಯೇ ಬದುಕನ್ನು ಕಟ್ಟಿಕೊಂಡವರು. ಯಾವತ್ತೂ ನನ್ನಂಥವರಿಗೆ ರಾಶಿ ರಾಶಿ ಅಂಕಗಳು ಸಿಕ್ಕಿರಲಿಲ್ಲ. ಆದರೆ ಬರೆಯುವ ಪರೀಕ್ಷೆಯಲ್ಲಿ ಸೋತವರೆಲ್ಲ ಬದುಕುವ ಪರೀಕ್ಷೆಯಲ್ಲಿ ಗೆದ್ದವರೇ. ಇವತ್ತು ಲಕ್ಷಾಂತರ ರೂಪಾಯಿ ಡೊನೇಷನ್ ಕೊಟ್ಟು ಸೇರುವ ಶಿಕ್ಷಣ, ಬದುಕನ್ನು ಮೇಲಿಂದ ಪ್ರವೇಶಿಸುವ ಅಭ್ಯಾಸ ಕಲಿಸುತ್ತಿದೆ. ಮೇಲಿಂದ ಇಳಿದವರು ಕೆಳಗಡೆ ನೋಡುವುದನ್ನೇ ಮರೆತುಬಿಡುತ್ತಾರೆ.

ಅಂಕಗಳ ಆಧಾರದಲ್ಲಿ ಶಾಲೆಗಳನ್ನಿಂದು ಮೌಲ್ಯಮಾಪನ ಮಾಡುವ ಕ್ರಮವಿದೆ. ಶಿಕ್ಷಣ ಸಂಸ್ಥೆಯನ್ನು ಅಳತೆ ಮಾಡುವಾಗ, ಅದರ ಕಟ್ಟಡದ ಉದ್ದ ಅಗಲ ಎತ್ತರ ಬಣ್ಣ ಸೌಂದರ್ಯ, ಕೊಡುವ ಸೌಲಭ್ಯಗಳ ಪಟ್ಟಿಯನ್ನು ಗಂಭೀರವಾಗಿ ಗಮನಿಸುವವರಿದ್ದಾರೆ. ಬದಲಾಗಿ, ಆ ಶಾಲೆ ಒಂದು ಭಾರತವನ್ನು ಸೃಷ್ಟಿಸುತ್ತದೆಯೇ? ವಿಭಿನ್ನ ಭಾಷೆ, ಜಾತಿ, ವರ್ಗ, ಹಳ್ಳಿಯ ಹಿನ್ನೆಲೆ, ನಗರ ಜೀವನ... ಇವೆಲ್ಲವನ್ನು ಒಂದೇ ತರಗತಿಯಲ್ಲಿ ಕೂತು ಮಾತನಾಡಲು ಅವಕಾಶ ಮಾಡಿಕೊಡುತ್ತದೆಯೇ? ಸಂವೇದನೆ, ಸಂಬಂಧ, ಸಹವಾಸ... ಇವು ಪಠ್ಯಕ್ರಮದೊಳಗೆ ಇಲ್ಲದಿದ್ದರೂ, ಶಾಲೆಯ ವಾತಾವರಣದಲ್ಲಿಯೇ? ಮುಂದೆ ಬದುಕಿಗೆ ಉದ್ಯೋಗದ ದಾರಿ ಮಾತ್ರವಲ್ಲ, ಬದುಕಿನ ಅರ್ಥವನ್ನು ಶಾಲೆ ಕಲ್ಪಿಸುತ್ತದೆಯೇ? ಎಂಬುದು ಶಾಲೆಯ ಮೌಲ್ಯಮಾಪನದ ಸಂದರ್ಭದಲ್ಲಿ ಮುಖ್ಯವಾಗಬೇಕು. ರೂಪಕೇಂದ್ರಿತ ಎಲ್ಲಾ ಶಾಲೆಗಳನ್ನು ಕೆಟ್ಟದೆನ್ನುವುದೂ ತಪ್ಪು. ಕೆಲವು ಮನಸ್ಸು, ಬುದ್ಧಿಕೇಂದ್ರಿತ ಸಮನ್ವಯ ಸಂಸ್ಥೆಗಳೂ ಇವೆ.

ಬಹುಪಾಲು ಖಾಸಗಿ ರೂಪಕೇಂದ್ರಿತ ಶಾಲೆಗಳಲ್ಲಿ ಪೋಷಕ ಮತ್ತು ಮಾಲೀಕರ ನಡುವೆ ಒಂದು ಒಪ್ಪಂದ ನಡೆಯುತ್ತದೆ. ‘ನಾವು ನಿಮಗೆ ಎರಡು ಕೇಜಿ ಮಣ್ಣು ಕೊಡುತ್ತೇವೆ. ಈ ಮಣ್ಣಿನಲ್ಲಿರುವ ಕಲ್ಲು–ಕಸ ತೆಗೆದು, ನೀರು ಸೇರಿಸಿ, ಸುಣ್ಣ ಬೆಲ್ಲ ಜೇಡಿ ಮಣ್ಣು ಸೇರಿಸಿ, ಹದ ಬರಿಸಿ ನೀವು ನಮಗೆ ಬೇಕಾದ ಉತ್ಪನ್ನವನ್ನು ಮಾಡಿಕೊಡಿ’ ಎಂಬ ಒಡಂಬಡಿಕೆಯದು. ಆ ಒತ್ತಡಕ್ಕೆ ಒಳಗಾದ ಶಾಲೆಯ ಮ್ಯಾನೇಜ್‌ಮೆಂಟ್, ಶಿಕ್ಷಕರು ಕೂಡ ಆ ಮಗುವನ್ನು ‘ಉತ್ಪನ್ನ’ವಾಗಿಸುವ ಬದ್ಧತೆಯಲ್ಲಿ ಕೆಲಸ ಮಾಡುತ್ತಾರೆ. ಭಾವನೆಯ ಸಂವೇದನೆ ಸಂಬಂಧಗಳ ಮೂಲಕ ವಿಕಸಿಸಬೇಕಾದ ಮಗುವನ್ನು ತಮ್ಮ ಆಕಾರಕ್ಕೆ ಬಡಿಯುವ ಬಗ್ಗಿಸುವ ರೂಪಿಸುವ ಕಾರ್ಖಾನೆಯ ಕಾರ್ಯ ಅಲ್ಲಿ ನಿರಂತರ ನಡೆಯುತ್ತದೆ. ಅಂಕಗಳ ಚೌಕಟ್ಟಿನೊಳಗೆ ಮಗುವನ್ನು ಕೂಡಿ ಹಾಕುವ ಭರದಲ್ಲಿ, ಸಂಸ್ಕಾರಕ್ಕೆ ಜಾಗವೇ ಅಲ್ಲಿ ಉಳಿಯುವುದಿಲ್ಲ. ಶಾಲೆ ಯಾವತ್ತೂ ಕಾರ್ಖಾನೆ ಆಗಬಾರದು. ಮಗು ಉತ್ಪನ್ನವಾಗಬಾರದು. ಶಿಕ್ಷಣ ಮೇಲಿಂದ ಇಳಿಯುವ ವ್ಯವಸ್ಥೆಯಲ್ಲ; ಅದು ಕೆಳಗಡೆಯಿಂದ ಕಟ್ಟಿಕೊಳ್ಳುವ ಬದುಕಿನ ಪಯಣ. ಆ ಪಯಣಕ್ಕೆ ಮಣ್ಣು ಬೇಕು, ನೋವು ಸಂಕಟ ಸವಾಲುಗಳು ಬೇಕು, ಪಳಗುವುದಕ್ಕೆ ಸಮಯ ಬೇಕು, ಮನುಷ್ಯತ್ವ ಬೇಕು. ಲೆಕ್ಕಕ್ಕಿಂತ ಹೆಚ್ಚು ಸೌಲಭ್ಯವಿರುವ ಆಕಾರಕೇಂದ್ರಿತ ಶಿಕ್ಷಣ ಸಂಸ್ಥೆಗಳು ತಕ್ಷಣಕ್ಕೆ ಅಪಾಯಕಾರಿಯೇನೂ ಅಲ್ಲ. ಆದರೆ ಅದೇ ಸೌಲಭ್ಯಗಳು ಏರುಕಾಲದ ಬದುಕಿನಲ್ಲಿ ಅಪಾಯಕಾರಿಯಾಗುವ ಸಾಧ್ಯತೆಗಳಿವೆ.

ಅಪಾಯ ಅಂದರೆ ಅಪಘಾತವಲ್ಲ; ಬದುಕಿನಿಂದ ದೂರವಾಗುವಿಕೆ. ಸಹಜ ಮಾಗುವಿಕೆಯಿಂದ ದೂರವಾಗುವಿಕೆ. ಮಗು ಕಲಿಯುವ ವಯಸ್ಸಿನಲ್ಲಿ ಎದುರಾಗಬೇಕಾದ ಸಹಜ ಅಸೌಕರ್ಯಗಳೇ ಇಲ್ಲದಂತೆ ಮಾಡಿದರೆ, ಕಲಿಕೆ ಸುಲಭವಾಗುತ್ತದೆ ಅಷ್ಟೇ ಹೊರತು ಆಳವಾಗುವುದಿಲ್ಲ. ಪ್ರಕೃತಿಯೊಂದಿಗೇ ಕಲಿಯುತ್ತಾ ಅಕ್ಷರವಂತನಾಗುವುದಕ್ಕೂ, ಪ್ರಕೃತಿಯಿಂದ ಸಂಬಂಧವನ್ನೇ ಕಳಚಿಕೊಂಡು ಅಕ್ಷರವಂತನಾಗುವುದಕ್ಕೂ ಭಾರಿ ವ್ಯತ್ಯಾಸವಿದೆ. ಬಿಸಿಲಿಗೆ ಮೈಯೊಡ್ಡುತ್ತಾ, ಮಳೆಯಲ್ಲಿ ನೆನೆದು, ಗಾಳಿಯ ತಿವಿತ ಅನುಭವಿಸುತ್ತಾ ಕಲಿಯುವ ಮಗು, ಪಾಠವನ್ನು ಮಾತ್ರ ಕಲಿಯುವುದಿಲ್ಲ; ಬದುಕನ್ನೂ ಕಲಿಯುತ್ತದೆ. ಆದರೆ ಬಿಸಿಲು–ಮಳೆ–ದೂಳು ಯಾವುದನ್ನೂ ಗಮನಿಸದೆ, ಯಾವುದನ್ನೂ ಅನುಭವಿಸದೆ ಕಲಿಯುವ ಮಗು, ಅಕ್ಷರವನ್ನು ಕಲಿಯಬಹುದು; ಆದರೆ ಬದುಕಿನ ಭಾಷೆ ಮಾತ್ರ ತಡವಾಗಿ ಅರ್ಥವಾಗುತ್ತದೆ.

ನನ್ನ ತಲೆಮಾರಿನವರ ಕಾಲು ನೋಡಿದರೆ ಸಾಕು. ಮೊಣಕಾಲಿನ ಮೇಲೆ ಹತ್ತಾರು ಗುರುತುಗಳು ಕಾಣಿಸುತ್ತವೆ. ಆ ಗುರುತು ಶಾಲೆಯ ಅಂಗಳದ ದಾಖಲೆ. ಮನೆ ಮುಂದೆ ಓಡಾಡಿದಾಗ, ದಾರಿಯಲ್ಲಿ ಜಾರಿ ಬಿದ್ದಾಗ, ಆಟವಾಡುತ್ತಾ ನೆಲಕ್ಕೆ ಉರುಳಿದಾಗ ಮೂಡಿದ ಸ್ಮರಣೆ. ನಾವು ಗಾಯದ ಜೊತೆಗೆ ರಕ್ತ ನೋಡಿದವರು. ರಕ್ತ ಹರಿಯುವುದನ್ನೂ, ಅದು ನಿಧಾನವಾಗಿ ಗಟ್ಟಿಯಾಗುವುದನ್ನೂ ನೋಡಿದವರು. ಆ ನೋವಿನ ನಡುವೆ ಮತ್ತೆ ಎದ್ದು ನಿಂತ ಅನುಭವವೇ ನಮಗೆ ಜಗತ್ತಿನ ಮೊದಲ ಪಾಠವಾಗಿತ್ತು. ಇವತ್ತು ನಮ್ಮದೇ ಮನೆಯ ಮಗು ಬಿದ್ದರೆ, ಮೊದಲು ನೆಲವನ್ನೇ ತಪ್ಪು ಮಾಡುತ್ತದೆ ಎಂಬ ಭಾವನೆ ಮೂಡಿಸಲಾಗುತ್ತದೆ. ಆದರೆ ಬದುಕಿನಲ್ಲಿ ನೆಲವೇ ಮೊದಲ ಗುರು. ಮಣ್ಣು ತಟ್ಟಿದಾಗಲೇ ದೇಹಕ್ಕೂ ಮನಸ್ಸಿಗೂ ತಾಳ್ಮೆ ಬರುತ್ತದೆ. ಅತಿಯಾದ ಸೌಲಭ್ಯಗಳು ಮಗುವನ್ನು ಸುರಕ್ಷಿತವಾಗಿಟ್ಟಂತೆ ಕಾಣಿಸಿದರೂ, ಅವು ಅವನನ್ನು ಅನುಭವದಿಂದ ದೂರ ಇಡುತ್ತವೆ.

ಶಿಕ್ಷಣ ಅಂದರೆ ಕೇವಲ ಅಕ್ಷರ ಕಲಿಸುವ ವ್ಯವಸ್ಥೆಯಲ್ಲ. ಅದು ಮಗು ಬಿಸಿಲು, ಮಳೆ, ನೋವು, ಆನಂದ... ಇವೆಲ್ಲದರ ನಡುವೆ ತನ್ನನ್ನು ತಾನು ಕಂಡುಕೊಳ್ಳುವ ಪ್ರಕ್ರಿಯೆ. ಆ ಪ್ರಕ್ರಿಯೆಯನ್ನು ಸೌಲಭ್ಯಗಳ ಹತ್ತಿಯಿಂದ ಮುಚ್ಚಿಬಿಟ್ಟರೆ, ಮಗು ಸುಂದರವಾಗಿ ಕಾಣಬಹುದು; ಆದರೆ ಗಟ್ಟಿಯಾಗುವುದಿಲ್ಲ. ಶಿಕ್ಷಣದ ಅಸಲಿ ಕೆಲಸ ಆಕಾರ ನೀಡುವುದಲ್ಲ; ಒಳಗಡೆ ಶಕ್ತಿ ಕಟ್ಟುವುದು. ಅದು ಮಣ್ಣಿನ ಸ್ಪರ್ಶವಿಲ್ಲದೆ ಸಾಧ್ಯವೇ?

ಪ್ರತಿಕ್ರಿಯಿಸಿ: feedback@sudha.co.in

